

# ಹಗಲುಗನಸಿಗೆ ಗಂಟೆ!

**■ ಜಿ.ವಿ. ಅರುಣ**

ಕಲೆ: ಸಂತೋಷ್ ಸಸಿಹಿತ್ಲು

‘ಅಮ್ಮ ನಾಳೆಯಿಂದ ಸ್ಕೂಲು ಶುರು!’ ಆರನೇ ತರಗತಿಗೆ ಹೋಗಬೇಕಾಗಿದ್ದ ಮಗ ಸಡಗರದಿಂದ ಬೆಳಿಗ್ಗೆ ಒಂಬತ್ತಕ್ಕೆ ಎದ್ದ ತಕ್ಷಣ ಹೇಳಿದಾಗ, ತಾಯಿಗೆ ಬಹಳ ಖುಷಿಯಾಗಿತ್ತು. ಶಾಲೆ ಪ್ರಾರಂಭವಾಗುವ ಮೊದಲೇ ತನ್ನ ಮಗ, ಪ್ರೀತಿಯ ಒಬ್ಬನೇ ಮಗ, ಈ ರೀತಿ ಶಾಲೆಗೆ ಹೋಗುವುದನ್ನು ನೆನಪಿಸಿಕೊಳ್ಳುವುದು ನೋಡಿ ಅವಳ ಆನಂದಕ್ಕೆ ಪಾರವೇ ಇರಲಿಲ್ಲ. ತನ್ನ ಮಗ ಅವನ ಓದಿನಲ್ಲಿ ಎಲ್ಲದರಲ್ಲೂ ಮೊದಲು ಬಂದು, ಐನ್‌ಸ್ಟೀನೊ, ಬಿಲ್ ಗೇಟ್ಸೊ ಆಗುವುದು ಅವಳಿಗೆ ಗ್ಯಾರಂಟಿಯಾಗಿ ಹೋಗಿತ್ತು. ಈ ಮಹಾನಿರೀಕ್ಷೆ ಅವಳ ಹಗಲುಗನಸಿನ ಫಲವಾಗಿತ್ತು. ‘ಬಿಲ್‌ಗೇಟ್ಸ್ ಯಾವ ತರಗತಿಯಲ್ಲಾದರೂ ಮೊದಲು ಬಂದಿದ್ದನೇ?’ ಎಂದು ಅವಳು ಯಾವತ್ತೂ ಗೂಗಲ್ಲಿನಲ್ಲಿ ಪರಿಶೀಲಿಸಿರಲಿಲ್ಲ. ಅವಳ ಲೆಕ್ಕದಲ್ಲಿ ಅಂಗೈಹುಣ್ಣಿಗೆ ಕನ್ನಡಿ ಬೇಕಿರಲಿಲ್ಲ.

ಪ್ರಸಿದ್ಧರ ವಿಷಯದಲ್ಲಿ, ‘ಅವರು ಎಲ್ಲಾ ತರಗತಿಗಳಲ್ಲೂ ಮೊದಲು ಬಂದಿರಲೇಬೇಕು, ಅವರು ಹೀಗೆ ಹೀಗೇ ಇದ್ದಿರಲೇಬೇಕು’ ಎಂದು ಕಲ್ಪಿಸಿಕೊಳ್ಳುವುದು ದೈವದತ್ತವಾಗಿ ನಮಗೆ ಬಂದಿರುವ ಊಹಾಚಾತುರ್ಯ! ಇದೇ ಕಿರಿಯರ ಜೀವನದ ಗುರಿಗಳನ್ನು ನಾವು ನಿರ್ಧರಿಸಲು ಬಳಸುವ ಅಳತೆಗೋಲು. ಮೊದಲು ಅಂಥ ಊಹಾಚಾತುರ್ಯವು ನಮಗಿದೆ ಎಂಬುದನ್ನು ನಾವು ಅರಿತು, ಅದನ್ನು ಪ್ರಜ್ಞಾಪೂರ್ವಕವಾಗಿ ಸಾಕ್ಷಾತ್ಕಾರ ಮಾಡಿಕೊಂಡು, ಸರಿಯಾಗಿ ಸಾಣೆ ಹಿಡಿದು ಉಪಯೋಗಿಸಿದರೆ, ನಮ್ಮ ಸೃಜನಶೀಲತೆ ಮಿನುಗುವುದರಲ್ಲಿ ಸಂಶಯವಿಲ್ಲ.

ಲೆನಿನ್, ರಷ್ಯಾದೇಶದಲ್ಲಿ ನಾಯಕನಾಗಿ ಹೊರಹೊಮ್ಮಿ, ಸೋವಿಯತ್ ಒಕ್ಕೂಟದ ಮುಂದಾಳತ್ವವನ್ನು ವಹಿಸಿಕೊಂಡ ಸಂದರ್ಭ. ಅವನಿಗೆ ದೂರದ ಪ್ರಾಂತ್ಯದ ಜನರು ಪ್ರೀತಿಯಿಂದ ಉಡುಗೊರೆ ನೀಡಲು ನಿರ್ಧರಿಸಿದರು. ತಮ್ಮಲ್ಲಿ ದೊರಕುವ ಶ್ರೇಷ್ಠ ಉಣ್ಣೆಯ ದಪ್ಪಬಟ್ಟೆಯ ಮೇಲೆ ಸ್ಥಳೀಯ ಹೆಸರಾಂತ ಕುಸುರಿ ಕೆಲಸ ಮಾಡಿಸಿ, ರಾಜಪೋಷಾಕಿನಂತೆ ಕಾಣುತ್ತಿದ್ದ ಒಂದು ಆಕರ್ಷಕ ನಿಲುವಂಗಿಯನ್ನು ಸಿದ್ಧಪಡಿಸಿ ಅವನಿಗೆ ಕಳುಹಿಸಿದ್ದರು. ಈ ಉಡುಗೊರೆಯನ್ನು ನೋಡಿ, ‘ಜನರ ದೃಷ್ಟಿಯಲ್ಲಿ ತಾನು ಎಷ್ಟು ಎತ್ತರ ಬೆಳೆದಿದ್ದೇನೆ’ ಎಂಬುದು ಬಹುಶಃ ಲೆನಿನ್‌ಗೆ ಗೊತ್ತಾಗಿರಬಹುದು! ಐದೂವರೆ ಅಡಿ ಎತ್ತರದ ಲೆನಿನ್‌ಗೆ ಉಡುಗೊರೆಯಾಗಿ ಬಂದ ಆ ನಿಲುವಂಗಿ ಏಳೂವರೆ ಅಡಿಯ ವ್ಯಕ್ತಿಗೆ ಸೂಕ್ತವಾಗಿತ್ತು. ಇದು ಆ ಉಡುಗೊರೆಯನ್ನು ಕಳುಹಿಸಿದ ಊರಿನ ಜನರು, ಎಂದೂ ನೋಡಿರದಿದ್ದ ಲೆನಿನ್‌ಅನ್ನು ಬಹಳ ಎತ್ತರದ ವ್ಯಕ್ತಿಯಾಗಿ ಕಲ್ಪಿಸಿಕೊಂಡ ಪರಿಣಾಮವಾಗಿ ಆಗಿದ್ದು! ಇದು ಆ ಊರಿನ ಜನರ ಊಹಾಚಾತುರ್ಯ. ಆ ನಿಲುವಂಗಿಯನ್ನು ಮಾಸ್ಕೋದ ಲೆನಿನ್ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಿದ್ದಾರೆ.

ಈಗ ಉಡುಗೊರೆಯ ವಿಷಯಕ್ಕೆ ಬಂದಾಗ ಸೀರೆಯ ಜೊತೆ ಮ್ಯಾಚಿಂಗ್ ಕುಪ್ಪಸದ ಬಟ್ಟೆಯನ್ನು, ಪಂಚೆಯ ಜೊತೆ ಶಲ್ಯವನ್ನು ಉಡುಗೊರೆಯಾಗಿ ಕೊಡುವುದು ವಾಡಿಕೆ ಅಲ್ಲದೆ ಅದು ಸುಲಭ. ಕುರ್ತಾ, ಶರ್ಟಿನಂಥ ಸಿದ್ಧ ಉಡುಪುಗಳನ್ನು ತಂದರೆ, ಪಡೆಯುವವರ ಆಕಾರದ ಕಲ್ಪನೆ ನಮಗೆ ಕರಾರುವಕ್ಕಾಗಿ ಇರಬೇಕಾಗುತ್ತದೆ. ಒಮ್ಮೆ ಗೆಳೆಯರೊಬ್ಬರ ಮನೆಯ ಸಮಾರಂಭಕ್ಕೆ ಅವರ ನೆಂಟರೊಬ್ಬರು ಒಂದು ಸುತ್ತು ದೊಡ್ಡ ಶರ್ಟನ್ನು ತಂದು ಬಳುವಳಿಯಾಗಿ ನೀಡಿದರು. ಅದನ್ನು ನೀಡುವಾಗ ತಾವು ತಂದಿರುವ ಅಳತೆಗೆ ಹೊಂದದ ಬಂಧುವಿನ ಆಕಾರ ಅವರ ಕಣ್ಣಿಗೆ ಥಟ್ಟನೆ ಬಿತ್ತು. ಬಳುವಳಿಯನ್ನು ತಂದ ಗಂಡ,